ಕೃ.ವಿ.ಕೆ/ಪ.ಕ/ನಾ.ಪ/7. ದಿನಾಂಕ 15.04.2026.

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ, ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್

# ಕೃಷಿ ವಿಜ್ಞಾನ ಕೇಂದ್ರ (ದ.ಕ.)

ಕಂಕನಾಡಿ, ಮಂಗಳೂರು– 575 002 ☎: 0824: 243187:

ICAR

## ಹರಾಜು ಪ್ರಕಟಣೆ

ವಿಷಯ : ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿ ಹಂದಿಗಳ ಹರಾಜು ಕುರಿತು.

ದಿನಾಂಕ 15.04.2026 ರಂದು ಪೂರ್ವಾಹ್ನ 10.30 ಗಂಟೆಗೆ ಸರಿಯಾಗಿ ಕೃಷಿ ವಿಜ್ಞಾನ ಕೇಂದ್ರ (ದ.ಕ.) ಮಂಗಳೂರು ಇಲ್ಲಿ 3 ಹಂದಿಗಳ ಹರಾಜು ನಡೆಯಲಿದೆ. ಹರಾಜಿನಲ್ಲಿ ಆಸಕ್ತಿಯುಳ್ಳವರು ಹರಾಜಿನ ನಿಯಮ ನಿಬಂಧನೆಯಂತೆ ಕಡ್ಡಾಯವಾಗಿ ತಮ್ಮ ಆಧಾರ್ ಕಾರ್ಡ್/ಆರ್.ಟಿ.ಸಿ.ಯ ನಕಲು ಪ್ರತಿಯೊಂದಿಗೆ ಭಾಗವಹಿಸಬೇಕಾಗಿ ವಿನಂತಿ.

ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ
ದಕ್ಷಿಣ ಕನ್ನಡ, ಮಂಗಳೂರು – 575 002

ಪ್ರತಿಯನ್ನು ಮಾಹಿತಿಗಾಗಿ

1. ವಿಸ್ತರಣಾ ನಿರ್ದೇಶಕರು, ಕ.ಪ.ಪ.ಮೀ.ವಿ.ವಿ, ಬೀದರ್ ಇವರಿಗೆ
2. ಕುಲಸಚಿವರು, ಕ.ಪ.ಪ.ಮೀ.ವಿ.ವಿ, ಬೀದರ್ ಇವರಿಗೆ

ಪ್ರತಿಯನ್ನು:

1. ಮುಖ್ಯಸ್ಥರು, ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ, ಕಾಪಿಕಾಡ್, ಉಳ್ಳಾಲ, ಮಂಗಳೂರು, ಇವರ ಮಾಹಿತಿಗಾಗಿ
2. ಸಹ ಸಂಶೋಧನಾ ನಿರ್ದೇಶಕರು, ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋದನಾ ಕೇಂದ್ರ, ಬ್ರಹ್ಮಾವರ ಇವರ ಮಾಹಿತಿಗಾಗಿ
3. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಜಪ್ಪಿನಮೊಗರು ಮಂಗಳೂರು ಇವರ ಮಾಹಿತಿಗಾಗಿ
4. ಸೂಚನಾ ಫಲಕಕ್ಕೆ
5. ಸಾಮಾಜಿಕ ಜಾಲತಾಣ:www.kvkdk
6. ಕಛೇರಿ ಪ್ರತಿ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ, ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ್

# ಕೃಷಿ ವಿಜ್ಞಾನ ಕೇಂದ್ರ (ದ.ಕ.)

ಕಂಕನಾಡಿ, ಮಂಗಳೂರು- 575 002 ☎: 0824: 243187

ICAR

---

ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿನ 3 ಹಂದಿಗಳ ಬಹಿರಂಗ ಹರಾಜು

*********

ಈ ಮೂಲಕ ರೈತರಿಗೆ ತಿಳಿಯಪಡಿಸುವುದೇನೆಂದರೆ, ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿನ **ಯಾರ್ಕ್‌ಶೇರ್ 3** ಹಂದಿಗಳನ್ನು ಬಹಿರಂಗ ಹರಾಜಿನ ಮೂಲಕ ಮಾರಾಟ ಮಾಡಲಾಗುವುದು. ಈ ಹರಾಜನ್ನು ಕಮಿಟಿಯ ಅಧ್ಯಕ್ಷರು ಮತ್ತು ಸದಸ್ಯರುಗಳಿಂದ ನಡೆಸಲಾಗುವುದು. ಆಸಕ್ತಿಯುಳ್ಳ ರೈತರು ಈ ಹರಾಜಿನಲ್ಲಿ ಭಾಗಹಿಸಿ ಹಂದಿಗಳನ್ನು ಖರೀದಿ ಮಾಡಬಹುದು.

ದಿನಾಂಕ : **22.04.2026** ರಂದು ಬೆಳಿಗ್ಗೆ **10.30** ಗಂಟೆಗೆ
ಹರಾಜಿನ ಸ್ಥಳ: ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
ಹರಾಜಾಗುವ ಹಂದಿಗಳ ವಿವರ: 2 (ಹೆಣ್ಣು), 1 (ಗಂಡು)

## ನಿಬಂಧನೆಗಳು

1. ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿನ ಹಂದಿಗಳ ಹರಾಜಿನಲ್ಲಿ ಭಾಗವಹಿಸುವ ಮುನ್ನ ಸವಾಲುಗಳು ಠೇವಣಿ ಮೊಬಲಗು ಮೂರು ಹಂದಿಗಳಿಗೆ 10,000/- (ರೂಪಾಯಿ ಹತ್ತು ಸಾವಿರ ಮಾತ್ರ) ಗಳನ್ನು ಹರಾಜು ನಡೆಯುವ ಸ್ಥಳದಲ್ಲಿ 1 ಗಂಟೆ ಮುಂಚೆ ಠೇವಣಿ ಕಟ್ಟಿ ರಸೀದಿ ಪಡೆಯತಕ್ಕದ್ದು.

2. ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ಹಂದಿಗೆ ನಿಗದಿಪಡಿಸಿದ ಆರಂಭಿಕ ಬೆಲೆಯಿಂದ (ಸರಕಾರಿ ದರದಿಂದ) ಹರಾಜು ಪ್ರಾರಂಭಿಸಲಾಗುತ್ತದೆ. ಬಿಡ್ಡುದಾರರು ಪ್ರತಿ ಭಾರಿಯ ಕನಿಷ್ಟ ರೂ. 500.00 ರಂತೆ ಸವಾಲು ಮಾಡಬೇಕು

3. ಹರಾಜಿನಲ್ಲಿ ವಿಫಲವಾದ ರೈತರಿಗೆ ಠೇವಣಿ ಮೊತ್ತವನ್ನು ಹರಾಜಿನ ನಂತರ ಹಿಂದಿರುಗಿಸಲಾಗುವುದು.

4. ಅಖೈರು ಧಡಾ ಸವಾಲು ಹಂದಿಗೆ ತಕ್ಕ ಕಿಮ್ಮತ್ತು ದೊರಕಿದೆ ಎಂದು ಹರಾಜು ನಡೆಸುವ ಅಧಿಕಾರಿಗಳಿಗೆ ತೋರಿದಲ್ಲಿ ಹರಾಜನ್ನು ಅಖೈರು ಧಡಾ ಸವಾಲುದಾರ ಹೆಸರಿಗೆ ನಿಲ್ಲಿಸಲಾಗುವುದು. ಇಲ್ಲವಾದಲ್ಲಿ ಯಾವುದೇ ಕಾರಣ ನೀಡದೆ ಹರಾಜನ್ನು ಹಿಂತೆದುಕೊಳ್ಳಲಾಗುತ್ತದೆ.

5. ಅಂತಿಮ ಬಿಡ್ಡುದಾರರು ಹರಾಜು ಮೊಬಲಗನ್ನು ದಿನಾಂಕ 24.04.2026 ರ ಒಳಗಾಗಿ ಪೂರ್ಣ ಪಾವತಿ ಮಾಡಿ ಹಂದಿಗಳನ್ನು ತೆಗೆದುಕೊಂಡು ಹೋಗಬೇಕು. ತಪ್ಪಿದಲ್ಲಿ ಅವಲ್ ಹರಾಜುದಾರರಿಗೆ ಜವಾಬ್ದಾರಿಯ ಮೇಲೆ ಹಂದಿಗಳನ್ನು ಮರು ಹರಾಜು ಮಾಡಲಾಗುತ್ತದೆ ಅಥವಾ ಅವರ ಮುಂದಿನ ಬಿಡ್ಡುದಾರರಿಗೆ ನೀಡಲಾಗುವುದು.

6. ಮರು ಹರಾಜಿನಲ್ಲಿ ನಷ್ಟ ಸಂಭವಿಸಿದರೆ ಅಂತಹ ನಷ್ಟವನ್ನು ಅವಲ್ ಹರಾಜುದಾರರಿಂದ ಕಂದಾಯದ ಬಾಕಿಯಂತೆ ವಸೂಲು ಮಾಡಲಾಗುತ್ತದೆ. ಅಂದರೆ ಮರು ಹರಾಜಿನಲ್ಲಿ ಜಾಸ್ತಿ ಉತ್ಪತ್ತಿಯಾದಲ್ಲಿ ಅಂತಹ ಜಾಸ್ತಿ ಮೊಬಲಗಿನ ಮೇಲೆ ಅವಲ್ ಹರಾಜುದಾರರಿಗೆ ಯಾವ ಹಕ್ಕು ಇರುವುದಿಲ್ಲ.

7. ಹರಾಜು ಮುಗಿಯುವವರೆಗೂ ಸದರಿ ಹಂದಿಗಳನ್ನು ಹರಾಜುದಾರರ ಜವಾಬ್ದಾರಿಯ ಮೇಲೆ ವಿಶ್ವವಿದ್ಯಾಲಯವು/ಕೇಂದ್ರವು ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತದೆ.

8. ಹರಾಜಿನಲ್ಲಿ ಸವಾಲು ಕೊಟ್ಟ ನಂತರ ಸದರಿ ಹಂದಿಗಳನ್ನು ಹಿಂಪಡೆಯಲಾಗುವುದಿಲ್ಲ. ಅಥವಾ ಇನ್ನಾವುದೇ ತಕರಾರನ್ನು ಅಂಗೀಕರಿಸಲಾಗುವುದಿಲ್ಲ.

9. ಹರಾಜು ಅಖೈರಾದ ಕೂಡಲೇ ರಿಜಿಸ್ಟರ್‌ನಲ್ಲಿ ಅಂತಿಮ ಪಾಲುದಾರರ ಸಹಿಯನ್ನು ಪಡೆಯಲಾಗುವುದು. ಸಹಿ ಮಾಡಿದ ನಂತರ ಹರಾಜುದಾರರು ಷರತ್ತುಗಳನ್ನು ಅಂಗೀಕರಿಸಿ ಅವುಗಳಿಗೆ ಬದ್ಧರಾದಂತೆ ಭಾವಿಸುವುದು. ಒಂದು ವೇಳೆ ಹರಾಜಿನಲ್ಲಿ ತಕರಾರು ಉದ್ಭವಿಸಿದರೆ ಹರಾಜು ನಡೆಸುವ ಅಧಿಕಾರಿಗಳ ತೀರ್ಮಾನವೇ ಅಂತಿಮ.

10. ಹರಾಜು ನಡೆಯುವ ಕ್ಷೇತ್ರದಲ್ಲಿ ರೋಗೋದ್ರೇಕ ಸಾಧ್ಯತೆ ಇರುವುದರಿಂದ ಖಾಸಗಿಯವರ ಇತರೆ ಯಾವುದೇ ಹಂದಿಗಳ ಪ್ರದರ್ಶನ ಹಾಗೂ ಮಾರಾಟವನ್ನು ನಿಷೇಧಿಸಲಾಗಿರುತ್ತದೆ.

11. ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ಹರಾಜು ಹಂದಿಗಳನ್ನು ಪರಿಶೀಲಿಸಬೇಕಾದಲ್ಲಿ ಹರಾಜು ಹಿಂದಿನ ದಿನ ಮಾತ್ರ ಅವಕಾಶವಿರುತ್ತದೆ.

12. ಸದರಿ ದಿನಾಂಕದಂದು ಹರಾಜು ಪ್ರಕ್ರಿಯೆ ಪೂರ್ಣಗೊಳ್ಳದಿದ್ದಲ್ಲಿ ಹರಾಜನ್ನು ಅಧಿಕಾರಿಯವರು ನಿಗದಿ ಪಡಿಸುವ ದಿನಕ್ಕೆ ಮುಂದುವರಿಸಲಾಗುವುದು.

13. ಹರಾಜಿನಲ್ಲಿ ಯಶಸ್ವಿಯಾದ ಬಿಡ್ಡುದಾರರು ಹಂದಿಗಳನ್ನು ನಿಗದಿತ ದಿನಾಂಕದ ಒಳಗಡೆ ತೆಗೆದುಕೊಂಡು ಹೋಗದಿದ್ದಲ್ಲಿ ಠೇವಣಿ ಮೊಬಲಗನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು

14. ಹರಾಜಿನಲ್ಲಿ ಬಿಡ್ಡು ಕೂಪನ್ ತೆಗೆದುಕೊಂಡು ಬಿಡ್‌ದಾರರಾಗಿ ಬಿದ್‌ನಲ್ಲಿ ಭಾಗವಹಿಸುವವರಿಗೆ ಮಾತ್ರ ಪ್ರವೇಶವಿರುತ್ತದೆ. ಜೊತೆಯಲ್ಲಿರುವವರಿಗೆ ಅಥವಾ ಹಿಂಬಾಲಕರಿಗೆ ಹರಾಜು ಆವರಣದಲ್ಲಿ ಕಡ್ಡಾಯವಾಗಿ ಪ್ರವೇಶವನ್ನು ನಿಷೇಧಿಸಲಾಗಿದೆ.

15. ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬ ರೈತರು ತಾವು ಹೊಂದಿರುವ ಆಧಾರಕಾರ್ಡ್ ಮತ್ತು ಆರ್.ಟಿ.ಸಿ (ಪಹಣಿ) ತರಬೇಕು.

16. ಹರಾಜು ಪ್ರಕ್ರಿಯೆಯಲ್ಲಿ ಯಾವುದೇ ತರಕಾರು ಉದ್ಭವಿಸಿದರೆ, ಹರಾಜು ನಡೆಸುವ ಅಧಿಕಾರಿಗಳು ಅಥವಾ ವಿಶ್ವವಿದ್ಯಾಲಯದ ತೀರ್ಮಾನವೇ ಅಂತಿಮವಾಗಿರುತ್ತದೆ.

ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥರು

ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಐ.ಸಿ.ಎ.ಆರ್., ಕೃಷಿ ವಿಜ್ಞಾನ ಕೇಂದ್ರ
ದಕ್ಷಿಣ ಕನ್ನಡ, ಮಂಗಳೂರು - 575 002